# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 388 (2830)
2. ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3. ಉತ್ತರಿಸುವ ದಿನಾಂಕ : 29.03.2022
4. ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಸಾದರಮಂಗಲ (ವೈಟ್ ಫೀಲ್ಡ್) ಕೈಗಾರಿಕಾ ಪ್ರದೇಶದಲ್ಲಿ ಕಾನ್.ಕಾರ್ಡ್ ಸಂಸ್ಥೆಯವರಿಗೆ ಕೆ.ಐ.ಎ.ಡಿ.ಬಿ ವತಿಯಿಂದ ಎಷ್ಟು ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿದೆ; | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ M/s. Concord India Pvt Ltd. ರವರಿಗೆ ಬೆಂಗಳೂರು ಜಿಲ್ಲೆ, ಕಾಡುಗೋಡಿ ಕೈಗಾರಿಕಾ ಪ್ರದೇಶದ ಸರ್ವೆ ನಂ: 1, ಬ್ಲಾಕ್ ನಂ: 73, ನಿವೇಶನ ಸಂಖ್ಯೆ: 6 ರಲ್ಲಿ 78 ಎಕರೆ 2219 ಚ.ಮೀ. ಜಮೀನನ್ನು ಹಂಚಿಕೆ ಮಾಡಲಾಗಿದೆ. |
| (ಆ) | ಯಾವ ಉದ್ದೇಶಕ್ಕೆ ಭೂಸ್ವಾಧೀನವನ್ನು ಯಾವ ದರದಂತೆ, ಯಾವ ದಿನಾಂಕದಂದು ಹಂಚಿಕೆ ಮಾಡಲಾಗಿದೆ; (ಪೂರ್ಣ ವಿವರ ನೀಡುವುದು) | ಸರ್ಕಾರಿ ಆದೇಶ ಸಂಖ್ಯೆ: ಸಿಐ 309 ಎಸ್.ಪಿಕ್ಯೂ 2007, ದಿನಾಂಕ: 26.05.2007 ರಂತೆ ಕೆ.ಐ.ಎ.ಡಿ.ಬಿ.ಯು M/s. Concord India Pvt Ltd. ರವರಿಗೆ ಪ್ರತಿ ಎಕರೆಗೆ ರೂ.50,00,000/- ದರದಂತೆ ದಿನಾಂಕ: 07.06.2007 ರ ಪತ್ರದ ಮೂಲಕ Infrastructure Facilities for IT & ITES companies ಚಟುವಟಿಕೆಗೆ ಹಂಚಿಕೆ ನೀಡಲಾಗಿದೆ. |
| (ಇ) | ಕಾನ್.ಕಾರ್ಡ್ ಸಂಸ್ಥೆಯವರಿಗೆ ಹಂಚಿಕೆಯಾದ ಭೂಮಿಯಲ್ಲಿ ಯೋಜನೆಯನ್ನಾದರೂ ಕಾರ್ಯಗತಗೊಳಿಸಿದ್ದಾರೆಯೇ; | ಕಾಡುಗೋಡಿ ಸರ್ವೆ ನಂ: 1 ರಲ್ಲಿ ಭೂಸ್ವಾಧೀನಪಡಿಸಿದ ಜಮೀನಿನಲ್ಲಿನ ನಿವೇಶನಗಳನ್ನು ಹಂಚಿಕೆ ಮಾಡಿದ M/s. Concord India Pvt Ltd. ಹಾಗೂ ಇತರೆ ಹಂಚಿಕೆದಾರರಿಗೆ ಅರಣ್ಯ ಇಲಾಖೆಯವರು ಸದರಿ ಜಮೀನು ಸರ್ಕಾರಿ ಅರಣ್ಯ ಪ್ರದೇಶವೆಂದು ನೀಡಿದ ನೋಟಿಸ್ ಮತ್ತು ಪ್ರಕ್ರಿಯೆಯನ್ನು ಪ್ರಶ್ನಿಸಿ M/s. Concord India Pvt Ltd,. ರವರು WP No: 7200/2008 C/W 29765-666/2009 ಪ್ರಕರಣವನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದು, ವಿಚಾರಣೆ ನಂತರ ಅರಣ್ಯ ಇಲಾಖೆಯವರು ನೀಡಿದ ನೋಟಿಸ್ ಮತ್ತು ಪ್ರಕ್ರಿಯೆಯನ್ನು ರದ್ದುಪಡಿಸಿ, ದಿನಾಂಕ: 25.05.2012 ರಂದು ಮಾನ್ಯ ಉಚ್ಚ ನ್ಯಾಯಾಲಯವು ಆದೇಶ ಹೊರಡಿಸಿದೆ. |

| | | |
|---|---|---|
| | | ಈ ಆದೇಶವನ್ನು ಪ್ರಶ್ನಿಸಿ, ಅರಣ್ಯ ಇಲಾಖೆಯು ದಾಖಲಿಸಿದ್ದ WA No: 4283/2012 & 8577-8578/2012, c/w WA No: 4205/2008 ಪ್ರಕರಣವು ವಿಚಾರಣೆ ನಂತರ ದಿನಾಂಕ: 23.07.2019 ರಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಜಾಗೊಂಡಿರುತ್ತದೆ.<br>ಅರಣ್ಯ ಇಲಾಖೆಯು ಈ ಆದೇಶವನ್ನು ಪ್ರಶ್ನಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ S.L.P (Civil) Diary No: 10430/2020 ಪ್ರಕರಣವು ದಿನಾಂಕ: 19.11.2020 ರಂದು ವಜಾಗೊಂಡಿರುತ್ತದೆ.<br>ಮೇಲ್ಕಂಡಂತೆ ಹಂಚಿಕೆ ಮಾಡಿದ ನಿವೇಶನ ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗಿದ್ದ ಕಾರಣ ಕಂಪನಿಯು ಉದ್ದೇಶಿತ ಯೋಜನೆಯನ್ನು ಅನುಷ್ಠಾನಗೊಳಿಸಿರುವುದಿಲ್ಲ. ಆದ್ದರಿಂದ, ಕಂಪನಿಯ ಕೋರಿಕೆ ಮೇರೆಗೆ ನಿವೇಶನದ ಗುತ್ತಿಗೆ ಅವಧಿಯನ್ನು ಪುನಃ 11 ವರ್ಷಗಳ ಅವಧಿಗೆ ಅಂದರೆ, ದಿನಾಂಕ: 07.06.2018 ರಿಂದ 06.06.2029ರವರೆಗೆ ಮಂಡಳಿಯ ಪತ್ರ ದಿನಾಂಕ: 02.12.2020 ರಲ್ಲಿ ವಿಸ್ತರಿಸಲಾಗಿದೆ. |
| (ಈ) | ಇತ್ತೀಚಿಗೆ ಕಾನ್.ಕಾರ್ಡ್ ಸಂಸ್ಥೆಯವರಿಗೆ ಹಂಚಿಕೆ ಮಾಡಿದ ಜಮೀನನ್ನು ನಿಯಮಬಾಹಿರವಾಗಿ ಎಂಬೆಸಿ ಸಂಸ್ಥೆಗೆ ವರ್ಗಾವಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಿನಾಂಕ: 22.10.2020 ರಂದು M/s. Concord India Pvt.Ltd. ತನ್ನ ಸಂಸ್ಥೆಯ ಹೆಸರನ್ನು M/s Embassy East Business Park Pvt Ltd ಎಂದು Registrar of Companies ನಲ್ಲಿ ಬದಲಾವಣೆ ಮಾಡಿಕೊಂಡಿರುವುದಾಗಿ ದಿನಾಂಕ: 09.11.2020 ರ ಮನವಿಯ ಮೂಲಕ ಕೆ.ಐ.ಎ.ಡಿ.ಬಿ ಯ ಗಮನಕ್ಕೆ ತಂದು ಕಂಪನಿ ಹೆಸರು ಬದಲಾವಣೆಗೆ ಅನುಮತಿ ಕೋರಿರುತ್ತಾರೆ.<br>ದಿನಾಂಕ: 26.06.2021 ರಂದು Sri Vijay Kumar Sajjan, Practicing Company Secretary ಇವರು ಕೆ.ಐ.ಎ.ಡಿ.ಬಿ.ಗೆ ನೀಡಿರುವ ಅಭಿಪ್ರಾಯದಲ್ಲಿ "There is no dilution of share holding has taken place on account of change of name of the Company M/s Concord India Pvt. Ltd. to M/s Embassy East Business Park Pvt. Ltd. since directly or indirectly, original promoters are continued to hold minimum 51% in M/s Embassy East Business Park Pvt. Ltd. either by the individuals or through its subsidiaries. Hence, change of name of the company may be considered." ಎಂದು ತಿಳಿಸಿರುತ್ತಾರೆ.<br>ಅದರಂತೆ, ದಿನಾಂಕ: 09.07.2021 ರಂದು M/s. Concord India Pvt Ltd. ಕಂಪನಿಯ ಮೂಲ ಷೇರುದಾರರು M/s Embassy East Business Park Pvt Ltd ಕಂಪನಿಯಲ್ಲಿ ಕನಿಷ್ಠ ಶೇಕಡಾ 51 ರಷ್ಟು ಷೇರನ್ನು ಮುಂದೆಯೂ ಸಹ ಹೊಂದಿರಬೇಕೆಂಬ ಷರತ್ತನ್ನು ವಿಧಿಸಿ, ಹಾಗೂ ದಿನಾಂಕ: 07.06.2007 |

<table>
<tr><td></td><td></td><td>ರಂದು ನೆರವೇರಿಸಿರುವ ಗುತ್ತಿಗೆ ಕರಾರಿನ ಷರತ್ತುಗಳು ಮುಂದುವರೆಯುವ ಷರತ್ತಿಗೊಳಪಟ್ಟು ಹೆಸರು ಬದಲಾವಣೆಗೆ ಅನುಮೋದನೆ ನೀಡಲಾಗಿದೆ.<br>ಈ ಹಿನ್ನೆಲೆಯಲ್ಲಿ M/s Concord India Pvt Ltd ತನ್ನ ಹೆಸರನ್ನು M/s Embassy Property Developments Pvt Ltd ಗೆ ಹೆಸರು ಬದಲಾವಣೆಗೆ ಅನುಮತಿಯನ್ನು ಮಂಡಳಿಯಲ್ಲಿ ಚಾಲ್ತಿಯಲ್ಲಿರುವ ಸಂವಿಧಾನ ಬದಲಾವಣೆಯ ನೀತಿಯಂತೆ ನೀಡಲಾಗಿದೆ.</td></tr>
<tr><td>(ಉ)</td><td>ದಾಬಸಪೇಟೆ 4 ಮತ್ತು 5 ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ (ಅವೇರಹಳ್ಳಿ ಕೈಗಾರಿಕಾ ಪ್ರದೇಶ) ಎಂಬೆಸಿ ಸಂಸ್ಥೆಗೆ ಲಾಜಿಸ್ಟಿಕ್ ಪಾರ್ಕ್ ನಿರ್ಮಾಣಕ್ಕೆ 120 ಎಕರೆ ಜಮೀನನ್ನು ಯಾವ ದರದಲ್ಲಿ, ಯಾವಾಗ ಹಂಚಿಕೆ ಮಾಡಲಾಗಿದೆ; (ಪೂರ್ಣ ವಿವರ ನೀಡುವುದು)</td><td>ದಿನಾಂಕ: 03.12.2018 ರಂದು ನಡೆದ 52ನೇ ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಯ ಅನುಮೋದನೆಯಂತೆ ಹೊರಡಿಸಿದ ಸರ್ಕಾರಿ ಆದೇಶ ಸಂ: ಸಿಐ 55 ಎಸ್.ಪಿಐ 2019 ದಿನಾಂಕ: 05.03.2019 ಮತ್ತು 05.05.2021 ರಂತೆ ಮೆ: Embassy Industrial Parks Pvt Ltd ರವರಿಗೆ Industrial and Logistic Park ಸ್ಥಾಪಿಸುವ ಯೋಜನೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದಾಬಸ್.ಪೇಟೆ 5ನೇ ಹಂತದ ಕೈಗಾರಿಕಾ ಪ್ರದೇಶದ 125.00 ಎಕರೆ ಜಮೀನನ್ನು (bulk allotment rate) ಪ್ರತಿ ಎಕರೆಗೆ ರೂ.156.00 ಲಕ್ಷದಂತೆ, ಶೇಕಡಾ 30ರಷ್ಟು ಮುಂಗಡ ಹಣ ರೂ.57,37,22,063/-ಗಳನ್ನು ಪಾವತಿಸಿಕೊಂಡು ದಿನಾಂಕ: 03.06.2021 ರಂದು ಹಂಚಿಕೆ ಮಾಡಲಾಗಿದೆ.</td></tr>
<tr><td>(ಊ)</td><td>ನಿಗಧಿತ ಕಾಲಾವಧಿಯಲ್ಲಿ ಹಂಚಿಕೆ ಮಾಡಿದ ಜಮೀನಿಗೆ ನಿಗಧಿಗೊಳಿಸಲಾದ ಒಟ್ಟು ಮೊತ್ತವನ್ನು ಸಂಸ್ಥೆಗೆ ಪಾವತಿಸಿದ್ದಾರೆಯೇ;</td><td rowspan="2">ಮೆ: Embassy Industrial Parks Pvt Ltd ರವರು ಹಂಚಿಕೆ ಪತ್ರದಲ್ಲಿನ ಷರತ್ತುಗಳನ್ವಯ ಶೇಕಡಾ 70ರಷ್ಟು ಬಾಕಿ ಹಣ ರೂ.136,77,30,000/-ಗಳನ್ನು ದಿನಾಂಕ: 03.09.2021 ರ ಒಳಗೆ ಪಾವತಿಸಬೇಕಿತ್ತು. ಆದರೆ, ಕಂಪನಿಯು ತಮಗೆ ಹಂಚಿಕೆಯಾಗಿರುವ ದಾಬಸ್.ಪೇಟೆ 5ನೇ ಹಂತದ ಕೈಗಾರಿಕಾ ಪ್ರದೇಶದ ಬ್ಲಾಕ್ ನಂ: 1 ರಲ್ಲಿ ಮಧ್ಯದಲ್ಲಿ ಬರುವ ರಸ್ತೆಯನ್ನು ಬದಲಾವಣೆ ಮಾಡಿ ನಿವೇಶನದ ಆಕಾರವನ್ನು ಬದಲಾವಣೆ ಮಾಡಲು ಕೋರಿದ್ದರು.<br>ದಿನಾಂಕ: 17.06.2021ರಂದು ನಡೆದ ಕೆ.ಐ.ಎ.ಡಿ. ಮಂಡಳಿ ಸಭೆಯಲ್ಲಿ ದಾಬಸ್.ಪೇಟೆ 5ನೇ ಹಂತ ಕೈಗಾರಿಕಾ ಪ್ರದೇಶದ ಪರಿಷ್ಕೃತ ವಿನ್ಯಾಸ ನಕ್ಷೆ ಅನುಮೋದನೆಯಾಗಿದ್ದು, ಸದರಿ ಪರಿಷ್ಕೃತ ವಿನ್ಯಾಸ ನಕ್ಷೆಯಲ್ಲಿ ಬ್ಲಾಕ್ ನಂ: 1 ರಲ್ಲಿನ ನಿವೇಶನಗಳಿಗೆ ರಸ್ತೆ ಬದಲಾವಣೆಯಾಗಿ ಆಕಾರ ಬದಲಾವಣೆಯಾಗಿರುತ್ತದೆ.<br>ಅದರಂತೆ, Embassy Industrial Parks Pvt Ltd ರವರಿಗೆ ದಾಬಸ್.ಪೇಟೆ 5ನೇ ಹಂತದ ಕೈಗಾರಿಕಾ ಪ್ರದೇಶ ಬ್ಲಾಕ್ ನಂ: 1-ಎ ರಲ್ಲಿ 124.20 ಎಕರೆ ಜಮೀನು re-align ಆಗಿರುವ ಬಗ್ಗೆ ದಿನಾಂಕ: 23.09.2021 ರಂದು ತಿಳಿಸಲಾಗಿದೆ.</td></tr>
<tr><td>(ಋ)</td><td>ನಿಗಧಿತ ಅವಧಿಯಲ್ಲಿ ಹಣ ಪಾವತಿಸದೆ ಇದ್ದರೂ ಮಂಡಳಿಯಿಂದ ಹಂಚಿಕೆ ರದ್ದುಪಡಿಸದಿರಲು ಕಾರಣಗಳೇನು?</td></tr>
</table>

| | | |
|---|---|---|
| | | ಅಲ್ಲದೇ, ಸದರಿ ಮಂಡಳಿ ಸಭೆಯಲ್ಲಿ, ದಾಬಸ್.ಪೇಟೆ 5ನೇ ಹಂತದ ಕೈಗಾರಿಕಾ ಪ್ರದೇಶದ (bulk allotment rate) ಪ್ರತಿ ಎಕರೆಗೆ ರೂ.139.00 ಲಕ್ಷದಂತೆ ಸಮಾನ ದರ ನಿಗಧಿಪಡಿಸಿರುತ್ತದೆ.<br>Embassy Industrial Parks Pvt Ltd ರವರು ದಿನಾಂಕ: 28.09.2021ರ ಪತ್ರದಲ್ಲಿ ಪರಿಷ್ಕೃತ ವಿನ್ಯಾಸ ನಕ್ಷೆಯಂತೆ ಹಂಚಿಕೆಯಾದ ಬ್ಲಾಕ್ ನಲ್ಲಿ ರಸ್ತೆ ಬದಲಾವಣೆಯಾಗಿರುವುದರಿಂದ, ಹಾಗೂ ಹಂಚಿಕೆಯಾದ ಜಮೀನಿನ ಪೈಕಿ 3 ಎಕರೆ ಜಮೀನಿಗೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದ ಕಾರಣ, ಬಾಕಿ ಹಣ ಪಾವತಿಸಲು ಹೆಚ್ಚಿನ ಕಾಲಾವಕಾಶ ಕೋರಿರುತ್ತಾರೆ.<br>ಅದರಂತೆ, ಎಂಬೆಸ್ಸಿ ಇಂಡಸ್ಟ್ರಿಯಲ್ ಪಾರ್ಕ್ ಪ್ರೈ.ಲಿ.ರವರಿಗೆ ದಿನಾಂಕ: 26.11.2021 ರಂದು ಪರಿಷ್ಕೃತ ಹಂಚಿಕೆ ದರ ಪ್ರತಿ ಎಕರೆಗೆ ರೂ.139.00 ಲಕ್ಷದಂತೆ ಬಾಕಿ ಹಣವನ್ನು ಬಡ್ಡಿಯೊಂದಿಗೆ ಪಾವತಿಸಲು ತಿಳಿಸಲಾಗಿದೆ.<br>ಮುಂದುವರೆದು, ಮೆ॥ ಹಾರಿಝುನ್ ಇಂಡಸ್ಟ್ರಿಯಲ್ ಪಾರ್ಕ್ ಪ್ರೈ.ಲಿ. (formerly known as M/s. Embassy Industrial Parks Pvt Ltd) ರವರು ಬಾಕಿ ಹಣ ರೂ.114,71,60,000/-ಗಳನ್ನು ದಿನಾಂಕ: 16.02.2022 ರಂದು ಪಾವತಿಸಿರುತ್ತಾರೆ.<br>ಸದರಿ ಕಂಪನಿಯ ಹೆಸರು ಬದಲಾವಣೆಗೆ ಸಂಬಂಧಿಸಿದಂತೆ ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಯಿಂದ ಅನುಮೋದನೆ ಪಡೆಯಲು ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯನ್ನು ಸಂಪರ್ಕಿಸಲು ದಿನಾಂಕ: 14.12.2021 ರಂದು ಕಂಪನಿಗೆ ತಿಳಿಸಲಾಗಿದೆ.<br>ಮೆ॥ ಎಂಬೆಸ್ಸಿ ಇಂಡಸ್ಟ್ರಿಯಲ್ ಪಾರ್ಕ್ ಪ್ರೈ.ಲಿ.ರವರಿಗೆ ಹಂಚಿಕೆಯಾದ ದಾಬಸ್.ಪೇಟೆ 5ನೇ ಹಂತದ ಕೈಗಾರಿಕಾ ಪ್ರದೇಶದ ಬ್ಲಾಕ್.ನಲ್ಲಿ ಸುಮಾರು 03 ಎಕರೆ ಜಮೀನಿಗೆ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿರುವುದಿಲ್ಲ.<br>ಅಲ್ಲದೇ ಸದರಿ ಕೈಗಾರಿಕಾ ಪ್ರದೇಶದ ವಿನ್ಯಾಸ ನಕ್ಷೆಯನ್ನು ಪರಿಷ್ಕೃತಗೊಳಿಸಿ ಹಂಚಿಕೆಯಾದ ಬ್ಲಾಕ್.ನ ಆಕಾರ ಬದಲಾವಣೆ ಮಾಡಿದ್ದರಿಂದ ಹಾಗೂ ಸಂಪೂರ್ಣ ಭೂ ಸ್ವಾಧೀನ ಪ್ರಕ್ರಿಯೆಯು ಇನ್ನೂ ಪೂರ್ಣಗೊಂಡಿರದ ಕಾರಣ ಹಂಚಿಕೆಯನ್ನು ರದ್ದುಪಡಿಸಿರುವುದಿಲ್ಲ. |

ಸಂಖ್ಯೆ: ಸಿಐ 138 ಐಎಪಿ(ಇ) 2022

(ಡಾ॥ ಮುರುಗೇಶ ಆರ್. ನಿರಾಣಿ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು